ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಪಶುವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆ ತುಂಬುವುದು.

132 (1074) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಇರುವ ಪಶು ಆಸ್ಪತ್ರೆ, ಪಶುಚಿಕಿತ್ಸಾಲಯದ ಸಂಖ್ಯೆ ಎಷ್ಟು? ಈ ಪಶು ಆಸ್ಪತ್ರೆ ಹಾಗೂ ಚಿಕಿತ್ಸಾಲಯದಲ್ಲಿ ಪಶುವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದರೆ, ಜಾನುವಾರುಗಳ ಚಿಕಿತ್ಸೆಗೆ ಅನಾನುಕೂಲವಾಗುತ್ತಿರುವುದು ನಿಜವಲ್ಲವೇ? ಕೊರತೆ ಇರುವ ಜಾಗಕ್ಕೆ ನಿಬ್ಬಂದಿ ವರ್ಗದವರನ್ನು ತುಂಬಿಕೊಂಡು ಚಿಕಿತ್ಸೆಗೆ ಅನುಕೂಲವಾಗುವ ಹಾಗೆ ಕೈಗೊಳ್ಳುವ ಕ್ರಮಗಳೇನು?

ಇ) ಕೊರಟಗೆರೆ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆಯನ್ನು ಹೊಸದಾಗಿ ತೆರೆಯುವ ಉದ್ದೇಶವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಯಾವ ವರ್ಷದಲ್ಲಿ ಪ್ರಾರಂಭಿಸಿ ಅನುಕೂಲ ಕಲ್ಪಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಪಶು ಆಸ್ಪತ್ರೆ - 2, ಪಶು ಚಿಕಿತ್ಸಾಲಯ - 2, ಬಂದಿದೆ

ಆ) ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಂದ ರೋಗಗ್ರಸ್ಥ ಜಾನುವಾರುಗಳ ಚಿಕಿತ್ಸೆಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲಾಗುತ್ತಿದೆ, ಖಾಲಿ ಇರುವ ಪಶು ವೈದ್ಯರ ಹುದ್ದೆಗಳನ್ನು ಹಾಗೂ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾ ಅಧಿಕಾರಿಗಳಿಗೆ ಅಧಿಕಾರ ಪ್ರಕ್ರಿಯೆ ನಡೆಯುತ್ತಿದೆ.

ಇ) ಪಶುವೈದ್ಯ ಆಸ್ಪತ್ರೆಗಳನ್ನು ಹೊಸದಾಗಿ ಪ್ರಾರಂಭ ಮಾಡುವ ಉದ್ದೇಶವು ಸರ್ಕಾರಕ್ಕೆ ಇಲ್ಲ.

ಶ್ರೀ ಸಿ. ಚನ್ನಿಗಪ್ಪ : ಸಾನ್ಯ ಅಧ್ಯಕ್ಷರೆ ನನ್ನ ತಾಲ್ಲೂಕಿಗೆ ಪಶು ಆಸ್ಪತ್ರೆಗಳು ಬೇಕೆಂದು ಐದಾರು ವರ್ಷಗಳಿಂದ ನಾನು ಪ್ರಸ್ತಾವನೆ ಕೊಟ್ಟಿದ್ದೆ, ಆದರೂ ಸರ್ಕಾರದಿಂದ ಸಮಾಧಾನಕರ ಉತ್ತರ ಬಂದಿಲ್ಲ. ಈಗ ಎಷ್ಟು ಆಸ್ಪತ್ರೆಗಳು ನಮ್ಮಲ್ಲಿವೆ? ಇನ್ನೆಷ್ಟು ಕೊಡುತ್ತೀರಿ ಎಂದು ಸಚಿವರು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಗೆ ಸರ್ವೆ ಶಿಫಾರ್ಸಿನ ಪ್ರಕಾರ ಈಗಾಗಲೇ ಒಂದು ಆಸ್ಪತ್ರೆ ಎಕ್ಸಸ್ ಇದೆ; ಇದು 1992- ಲೈವ್‌ಸ್ಟಾಕ್ ಸರ್ವೆ ಪ್ರಕಾರ ಇರುವುದು. ಈಗ ಮತ್ತೆ ಬೇಕು ಅಂತ ಕೇಳುತ್ತಿದ್ದೀರಿ, ಅದನ್ನು ಮುಂದಿನ ದಿನಗಳಲ್ಲಿ ಸರ್ಕಾರ ಪರಿಶೀಲಿಸುವುದು. ಕಾರಣ, ಹಾಲಿ ಇರುವ ಆಸ್ಪತ್ರೆಗಳಿಗೆ ಇನ್‌ಫ್ರಾಸ್ಟ್ರಕ್ಚರ್ ಏನು ಒದಗಿಸಬೇಕೋ ಅದನ್ನು ಸರ್ಕಾರ ಸಧ್ಯಕ್ಕೆ ಮಾಡುವುದು.

ಶ್ರೀ ಕೆ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಬೇಡಿಕೆ ಔಷಧಿಗಳಿಗೆ ಕಳೆದ ವರ್ಷವಾಗಲೀ ಈ ವರ್ಷವಾಗಲೀ ಸರಬರಾಜು ಆಗಿಲ್ಲ. ಉದಾಹರಣೆ ತ್ಯಾಮಗೊಂಡ್ಲು ಆಗಬಹುದು, ದಾಬಸ್‌ಪೇಟೆ ಆಗಬಹುದು, ಕೊರಟಗೆರೆ, ಮಧುಗಿರಿ, ಕೊಳವನಹಳ್ಳಿ ಆಗಬಹುದು, ಅನೇಕ ಆಸ್ಪತ್ರೆಗಳಿಗೆ ನಾವು ಹೋಗಿ ನೋಡಿದಾಗ ಅಲ್ಲಿ ಡಾಕ್ಟರ್ ಮಾತ್ರ ಇರುತ್ತಾರೆಯೇ ಹೊರತು ಬೇರೇನೂ ಇರುವುದಿಲ್ಲ. ರೈತರುಗಳು ಅಲ್ಲಿಗೆ ಹೋದರೆ ಡಾಕ್ಟರ್‌ಗಳು ಔಷಧಿಗಾಗಿ ಚೀಟಿಯನ್ನು ಬರೆದುಕೊಡುತ್ತಾರೆ. ಆ ರೈತರಲ್ಲಿ ನೂರು ರೂಪಾಯಿಗಳು ಕೂಡ ಇರುವುದಿಲ್ಲ ಮತ್ತು ಅವರ ಊಟಕ್ಕೂ ಸಹ ಹಣ ಇರುವುದಿಲ್ಲ. ಸರ್ಕಾರ ಅಲ್ಲಿ ರೈತರಿಗೆ ಔಷಧಿ ಕೊಡದೇ ಇರುವುದರಿಂದ ಶೋಚನೀಯ ಪರಿಸ್ಥಿತಿಯುಂಟಾಗಿದೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಔಷಧಿಗಳನ್ನು ಕೊಡುವ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಅಲ್ಲಿ ರೈತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ನಿಭಾಯಿಸಿಲ್ಲ ಎನ್ನುವ ಮಾತನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಇವತ್ತೇನು 5 ಪರ್‌ಸೆಂಟ್ ಕಟ್‌ನಲ್ಲಿ 900 ಹುದ್ದೆಗಳು ಕಳೆದುಹೋಗಿದ್ದವು, ಅದನ್ನು ಭರ್ತಿ ಮಾಡುತ್ತಿದ್ದಾರೆ. ವೆಟರ್‌ನರಿ ಇನ್ಸ್‌ಪೆಕ್ಟರ್ಸ್, ವೆಟರ್‌ನರಿ ಅಸಿಸ್ಟೆಂಟ್ಸ್ ಮತ್ತೆ ಡಾಕ್ಟರ್ಸ್ ರಾಜ್ಯದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಬಾಕಿ ಇದೆಯೋ ಎಲ್ಲವನ್ನೂ ತುಂಬಿ ಎಂದು ನಾವು ಅವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಅದು ನಿಮ್ಮ ಗಮನಕ್ಕೂ ಬಂದಿದೆ. ಡಾಕ್ಟರ್‌ಗಳು ಮತ್ತು ವೆಟರ್‌ನರಿ ಅಸಿಸ್ಟೆಂರ್ ಡ್ಯುಟಿ ರಿಪೋರ್ಟ್ ಮಾಡಿಕೊಳ್ಳುವುದು ಎಲ್ಲವೂ ಕೂಡ ಈಗ ಪ್ರಾರಂಭವಾಗಿದೆ. ಬಹುಶಃ ಈಗಾಗಲೇ 109 ಜನರು ಡ್ಯೂಟಿ ರಿಪೋರ್ಟನ್ನು ಮಾಡಿಕೊಂಡಿದ್ದಾರೆ. ನಿಮ್ಮಲ್ಲಿ ಆ ರೀತಿ ರಿಪೋರ್ಟ್ ಮಾಡಿಕೊಳ್ಳದೆ, ಕೆಲಸಕ್ಕೆ ಹಾಜರಾಗದೇ ಇದ್ದರೆ ಅದನ್ನು 15 ದಿವಸ ಬಿಟ್ಟು ನನ್ನ ಗಮನಕ್ಕೆ ತನ್ನಿ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಖಾಲಿ ಇರುವ ಎಲ್ಲಾ ವೇಕೆನ್ಸಿಗಳನ್ನು ನಾನು ಭರ್ತಿ ಮಾಡಿಕೊಡುತ್ತೇನೆ.

ಶ್ರೀ ಎನ್. ಸಂಪಂಗಿ : ಕೋಲಾರ ಜಿಲ್ಲೆಯಲ್ಲಿ ಎಷ್ಟು ಜನರನ್ನು ಅಪಾಯಿಂಟ್ ಮಾಡಿದ್ದಾರೆಂದು ಹೇಳಬೇಕು. ಚಿಕ್ಕಬಳ್ಳಾಪುರ ಪಾರ್ಲಿಮೆಂಟ್‌ಗೆ ಬರುತ್ತದೆ. ನಮಗೆ ಸಂಬಂಧಪಟ್ಟ ವಿಚಾರವೇ ಇದು.

ಅಧ್ಯಕ್ಷರು : ಇದು ಕೊರಟಗೆರೆ ಬಗ್ಗೆ ಮಾತ್ರ ಪ್ರಶ್ನೆಯಿದೆ ಕೊರಟಗೆರೆ ವಿಷಯ ಕೇಳುವುದು ಇದ್ದರೆ ಕೇಳಿ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಎಂಟು ತಾಲ್ಲೂಕುಗಳ ಬಗ್ಗೆ ನೀವು ಕೇಳುವುದಕ್ಕಾಗುವುದಿಲ್ಲ.

ಶ್ರೀ ಎನ್.ಸಂಪಂಗಿ : ನಮ್ಮ ಕೋಲಾರ ಜಿಲ್ಲೆಯ ಬಾಗೇಪಲ್ಲಿಗೆ ಎಷ್ಟು ಜನರನ್ನು ಅಪಾಯಿಂಟ್ ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಹಾಗಾದರೆ ನಾನು ಎಲ್ಲರಿಗೂ, ಪ್ರತಿಯೊಂದು ತಾಲ್ಲೂಕಿನವರಿಗೂ ಇಲ್ಲಿ ಅಲೋವಮಾಡಬೇಕಲ್ಲ? ನೀವು ಕೇಳಿದ ಪ್ರಶ್ನೆಗಳಿಗೆ ಅವರ ಹತ್ತಿರ ಉತ್ತರ ಇರುವುದಿಲ್ಲ. ಇದು ಕೊರಟಗೆರೆಗೆ ಮಾತ್ರ ಸಂಬಂಧಿಸಿದ್ದು.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ವರದಿಯನ್ನು ಕೊಟ್ಟರೆ ಗೊತ್ತಾಗುತ್ತದಲ್ಲ; ಎಷ್ಟು ಡಾಕ್ಟರ್‌ಗಳನ್ನು ಹಾಕಿದ್ದಾರೆ? ಪ್ಯಾರಾ ಮೆಡಿಕಲ್ ಸ್ಟಾಫ್‌ಗಳನ್ನು ಎಷ್ಟು ಹಾಕಿದ್ದಾರೆ? ನಮಗೆಲ್ಲಾ ಗೊತ್ತಾಗುತ್ತದೆ; ಎಲ್ಲೆಲ್ಲಿ ಎಷ್ಟೆಷ್ಟು ಹಾಕಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದು ಇಡೀ ರಾಜ್ಯಕ್ಕೇ ಅನ್ವಯಿಸುವಂಥಾದ್ದು. ತಾವು ನಮ್ಮನ್ನು ಕೇಳಬೇಡಿ ಎಂದರೆ ಹೇಗೆ?

ಅಧ್ಯಕ್ಷರು : ಅವರು ಕೊರಟಗೆರೆ ಬಗ್ಗೆ ಮಾತ್ರ ಪ್ರಶ್ನೆ ಕೇಳಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಎಲ್ಲಾ ಕಡೆಯಲ್ಲೂ ಸಿಬ್ಬಂದಿ ಕೊರತೆ ಇದೆ.

ಅಧ್ಯಕ್ಷರು : ಇದೆ; ಅದನ್ನು ನಾನು ಒಪ್ಪುತ್ತೇನೆ. ಅವರು ಉತ್ತರವನ್ನು ಕೊಡಲಿ.

ಶ್ರೀ ಬಿ.ಎನ್. ಬಚ್ಚೇಗೌಡ : -ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ ಡಾಕ್ಟರ್ಸ್ ಎಲ್ಲವೂ ಕೊರತೆ ಇದೆ. ಮಾನ್ಯ ಸಚಿವರಿಗೆ ಮಾಹಿತಿ ಇದ್ದರೆ ಸದನಕ್ಕೆ ಹೇಳಲಿ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಈ ಸ್ಟಾಫ್ ವಿಚಾರದಲ್ಲಿ ಅವರ ಪ್ರಶ್ನೆಯಲ್ಲೇ ಎಲ್ಲಾ ಬಂದಿರುವುದರಿಂದ ರಾಜ್ಯಕ್ಕೇ ಅನ್ವಯಿಸುವಂತಹ ಉತ್ತರವನ್ನು ನಾನು ಕೊಟ್ಟಿದ್ದೇನೆ; ಅಂದರೆ ಎಲ್ಲೆಲ್ಲಿ ಡಾಕ್ಟರ್‌ಗಳು, ವೆಟರ್‌ನರಿ ಅಸಿಸ್ಟೆಂಟ್‌ಗಳು, ವೆಟರ್‌ನರಿ ಇನ್ಸ್‌ಪೆಕ್ಟರ್‌ಗಳ ಹುದ್ದೆಗಳು ಖಾಲಿ ಇವೆ, ಅಷ್ಟೂ ಹುದ್ದೆಗಳನ್ನು ಸರ್ಕಾರ ತುಂಬುತ್ತಿದೆ. ಆಯಾ ಡೆಪ್ಯುಟಿ ಕಮೀಷನರ್‌ಗಳಿಗೆ ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಎಷ್ಟೆಷ್ಟು ಅಪಾಯಿಟ್‌ಮೆಂಟ್ಸ್ ಆಗಿದೆ ಎಂದು ರಿಪೋರ್ಟ್ಸ್ ಆಗಿದೆ ಎಂದು ನಮಗೆ ಮಾಹಿತಿ ಬಂದಿದೆ. ತಮ್ಮ ತಮ್ಮ ತಾಲ್ಲೂಕುಗಳಲ್ಲಿ ಜಿಲ್ಲೆಗಳಲಿ ಏನಾದರೂ ಅವರು ಬಂದು ರಿಪೋರ್ಟ್ ಮಾಡಿಕೊಳ್ಳದಿದ್ದರೆ, ಏನಾದರೂ ಬೇರೆ ಕಾರಣಕ್ಕೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಮಾಡಿಕೊಡುವಂಥ ಜವಾಬ್ದಾರಿ ಸರ್ಕಾರಕ್ಕೆ ಇದೆ ಎಂದು ಹೇಳಿ ನಾನು ನಿಮಗೆ ಆಶ್ವಾಸನೆಯನ್ನು ಕಟ್ಟಿದ್ದೇನೆ. ಇನ್ನು ಔಷಧಿಗಳ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ; ಏನೂ ಕೊಟ್ಟಿಲ್ಲವೆಂದರೆ ಅದು ಸರಿಯಲ್ಲ. ಸುಮಾರು ಐದು ಕೋಟಿ ರೂಪಾಯಿಗಳ ಸಾಮಗ್ರಿಗಳನ್ನು ಈಗಾಗಲೇ ಪೂರೈಸಿದ್ದೇವೆ. ಎರಡು ಕಂತುಗಳನ್ನು ಕೊಟ್ಟಿದ್ದೇವೆ. ಮೂರನೇ ಕಂತು ಈಗ ಹೋಗುತ್ತಿದೆ. ಅವರು ಒಂದು ಮೂಲಭೂತವಾದ ವಿಚಾರವನ್ನು ಎತ್ತಿದ್ದಾರೆ; ಏನೆಂದರೆ, ಔಷಧಿಗಳನ್ನು ಕೊಡುವ ಕ್ವಾಂಟಿಟಿ ಸಾಲದು ಎಂದಿದ್ದಾರೆ. ನಮ್ಮ ಅಂದಾಜಿನ ಪ್ರಕಾರ ಸಣ್ಣದು, ಮಧ್ಯಮ ಮತ್ತು ದೊಡ್ಡದು ಈ ಮೂರು ಗುಂಪುಗಳು ಸೇರಿ ಸುಮಾರು ಒಂಭತ್ತು ಕೋಟಿ ಪ್ರಾಣಿಗಳಿದ್ದು, ನಾವು ಇವತ್ತಿನವರೆಗೂ ಕೊಡುತ್ತಿರುವ ಹಣ 5 ಕೋಟಿ ರೂಪಾಯಿಗಳು ಸರಾಸರಿ 80 ಪೈಸೆ ಒಂದು ಪ್ರಾಣಿಗೆ 365 ದಿವಸಕ್ಕೆ. ಅದನ್ನು ಜಾಸ್ತಿ ಮಾಡಬೇಕೆನ್ನುವ ವಿಚಾರದಲ್ಲಿ ನಮ್ಮದೇನೂ ತಕರಾರಿಲ್ಲ. ಆ ವಿಚಾರವನ್ನು ಈಗ ಪ್ರೀ-ಬಜೆಟ್ ಮೀಟಿಂಗ್‌ನಲ್ಲಿ ಮಾತುಕತೆ ನಡೆದಾಗ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ಸಾರಿ ಅದನ್ನು ಹೆಚ್ಚು ಮಾಡಿಸುತೇವೆ.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಸಿಬ್ಬಂದಿಯನ್ನು ತುಂಬುವ ಬಗ್ಗೆ ಆದೇಶವನ್ನು ಕೊಟ್ಟಿದ್ದೇವೆ ಮಾನ್ಯ ಸಚಿವರು ಹೇಳಿದ್ದಾರೆ. ಯಾವ ಆಸ್ಪತ್ರೆಗೆ ಹೋದರೂ ಅಲ್ಲಿ ಜವಾನರಿಲ್ಲ; ತಾಲ್ಲೂಕು ಆಸ್ಪತ್ರೆ, ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಹೋಗಿ ನೋಡಿದರೂ ಅಲ್ಲಿ ಜವಾನರೇ ಇಲ್ಲ. ವರ್ಷಕ್ಕೆ

ಒಂದು ಪ್ರಾಣಿಗೆ ಸರಾಸರಿ 80 ಪೈಸೆ ಕೊಡುತ್ತೇವೆಂದು ಹೇಳುತ್ತಾರೆ. ತಲಾವಾರು ಎಷ್ಟು ಕೊಡುತ್ತಾರೆ? ಹಸುಗಳನ್ನು ಸಾಕುತ್ತೇವೆಂದು ಹೇಳುತ್ತಾರೆ. ತಲಾವಾರು ಎಷ್ಟು ಕೊಡುತ್ತಾರೆ? ಹಸುಗಳನ್ನು ಸಾಕುತ್ತಿರುವವರು ನೂರಕ್ಕೆ 70 ರಷ್ಟು ಜನರು, ನಮ್ಮ ಹಳ್ಳಿಯ ರೈತರು. ಹಸುಗಳನ್ನು ಸಾಕಿ ಜೀವನ ಸಾಗಿಸುವುದೇ ನಮ್ಮ ಜನರ ಕಸುಬಾಗಿದೆ. ಒಂದು ಹಸುವಿಗೆ ಬರೀ 80 ಪೈಸೆ ಕೊಡುತ್ತೇವೆಂದರೆ ಹೇಗೆ? ಇದರ ಬಗ್ಗೆ ಇದು ಎಷ್ಟು ಸರಿ ಎಂದು ಸರ್ಕಾರ ಯೋಚನೆ ಮಾಡಬೇಕು. ಮುಂದಿನ ದಿನಗಳಲ್ಲಿ ಮಾನ್ಯ ಮಂತ್ರಿಗಳು ಆ ವಿಚಾರವಾಗಿ ಯೋಜನೆ ಮಾಡಿ ಹೆಚ್ಚಿನ ಔಷಧಿ ಕೊಡುವ ಬಗ್ಗೆ ಮತ್ತು 'ಡಿ' ಗ್ರೂಪ್ ನೌಕರರನ್ನು ಭರ್ತಿ ಮಾಡುವ ಬಗ್ಗೆ ಯೋಚನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ : ನಾನು 80 ಪೈಸೆ ಕೊಡುತ್ತೇನೆಂದು ಹೇಳಲಿಲ್ಲ; ಈಗ ಹಾಲಿ ಇರುವ ವ್ಯವಸ್ಥೆ ಬಗ್ಗೆ ನಾನು ಹೇಳಿದ್ದೇನೆ. ಹಿಂದೆಯೂ ಕೂಡ ತಾವು ಈ ಸದನದಲ್ಲಿ ಸದಸ್ಯರಾಗಿದ್ದಿರಿ. ಸರ್ಕಾರ ಎಷ್ಟರಮಟ್ಟಿಗೆ ಹಣವನ್ನು ಒದಗಿಸುತ್ತಾ ಇತ್ತು ಎನ್ನುವ ವಿಚಾರವನ್ನು ಹೇಳಿದ್ದೇನೆ. ಆದರೆ ನಾನು ಈ ಒಂದು ವಾದವನ್ನು ಒಪ್ಪಿಕೊಂಡಿದ್ದೇನೆ, ಇದನ್ನು ಜಾಸ್ತಿ ಮಾಡಬೇಕೆಂದು ಹೇಳಿ; ಈ ಸಾರಿ ಜಾಸ್ತಿ ಮಾಡಿಸುತ್ತೇವೆಂದು ಒಪ್ಪಿಕೊಂಡಿದ್ದೇವೆ. ಈ 'ಡಿ' ಗ್ರೂಪ್ ನೌಕರರ ಬಗ್ಗೆ ಡೆಪ್ಯುಟಿ ಕಮೀಷನರ್ಸ್‌ಗೆ ಪವರ್ಸ್ ಕೊಟ್ಟಿದ್ದೇವೆ. ಯಾವ ಯಾವ ಇಲಾಖೆಯಲ್ಲಿ ಎಕ್ಸ್‌ಸ್ ಇದ್ದಾರೆ, ಅವರನ್ನು ಷಿಫ್ಟ್ ಮಾಡಿ ಎಂದು ಹೇಳಿದ್ದೇವೆ. ನಾನು 14 ಜಿಲ್ಲೆಗಳಲ್ಲಿ ಪ್ರವಾಸ ಹೋಗಿ ವಿಚಾರ ಮಾಡಿದಾಗ ದಾವಣಗೆರೆತ, ಹಾವೇರಿ, ಗದಗ್, ಬೆಳಗಾಂ ಇಲ್ಲೆಲ್ಲಾ ಕ್ರಮ ತೆಗೆದುಕೊಂಡಿದ್ದಾರೆ. ನಿಮ್ಮ ಜಿಲ್ಲೆಯಲ್ಲಿ ಕ್ರಮ ತೆಗೆದುಕೊಂಡಿಲ್ಲದಿದ್ದರೆ ಇನ್ನು 15 ದಿವಸಗಳಾದಮೇಲೆ ನನ್ನ ಗಮನಕ್ಕೆ ತನ್ನಿ ಅದು ಡಾಕ್ಟರ್‌ಗಳು ಇರಬಹುದು, ವೆಟರ್‌ನರಿ ಇನ್ಸ್‌ಪೆಕ್ಟರ್ಸ್ ಇರಬಹುದು, ವೆಟರ್‌ನರಿ ಅಸಿಸ್ಟೆಂಟ್‌ಗಳಿರಬಹುದು, ಗ್ರೂಪ್ 'ಡಿ' ನಲ್ಲಿ ಡ್ರೈವರ್‌ಗಳು ಇರಬಹುದು, ಪ್ಯೂನ್ ಇರಬಹುದು, ಇವೆಲ್ಲವನ್ನು ತುಂಬಿಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಕೆಲವು ಜಿಲ್ಲೆಗಳಲ್ಲಿ ತಾಂತ್ರಿಕ ವಿಚಾರಗಳಿಂದ ಆಗದೇ ಇರಬಹುದು. ಎರಡೆರಡು ಜಿಲ್ಲೆಗಳಲ್ಲಿ ಸೆಲೆಕ್ಟ್ ಆಗಿ ಅವರು ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳದೇ ಇರಬಹುದು. ವೆಟರ್‌ನರಿ ಇನ್ಸ್‌ಪೆಕ್ಟರ್ ಕಡತವನ್ನು ಈಗ ನಾವು ಕ್ಲಿಯರ್ ಮಾಡುತ್ತಿದ್ದೇವೆ. ವೆಟರ್‌ನರಿ ಅಸಿಸ್ಟೆಂಟ್‌ಗಳ ಬಗ್ಗೆ ಕೋರ್ಟ್‌ನಲ್ಲಿ ಕೇಸ್ ಏನಿತ್ತು ಅದು ನಿಮ್ಮ ಕಾಲದಿಂದಲೂ ಇತ್ತು; ಅದನ್ನು ನಾವು ಈಗ ಕ್ಲಿಯರ್ ಮಾಡಿದ್ದೇವೆ. ಒಟ್ಟು 230 ಜನರಲ್ಲಿ ಈಗಾಗಲೇ 109 ಜನ ಡಾಕ್ಟರ್‌ಗಳು ರಿಪೋರ್ಟ್ ಮಾಡಿಕೊಂಡಿದ್ದಾರೆ. ನಿಮ್ಮ ಜಿಲ್ಲೆಯಲ್ಲಿ ಏನಾದರೂ ಆಗದಿದ್ದರೆ ದಯಮಾಡಿ ನನ್ನ ಗಮನಕ್ಕೆ ತನ್ನಿ; ಯಾವ ಜಿಲ್ಲೆ, ಯಾವ ತಾಲ್ಲೂಕಾದರೂ ಪರವಾಗಿಲ್ಲ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹಿಂದೆ ಇದ್ದಂಥಾದ್ದು ಇಷ್ಟೇ ಲಭ್ಯ ಇರತಕ್ಕದ್ದು ಎಂದು ಹೇಳಿದ್ದಾರೆ 1995-96ರಲ್ಲಿ 9 ಕೋಟಿ 34 ಲಕ್ಷ ಇತ್ತು. 1996-97ಕ್ಕೆ 10 ಕೋಟಿ 15 ಲಕ್ಷ ಬಂತು, 1998-99ಕ್ಕೆ 8 ಕೋಟಿ 9 ಲಕ್ಷ ಬಂತು 1999-2000ಕ್ಕೆ 5 ಕೋಟಿ 46 ಲಕ್ಷಕ್ಕೆ ಬಂತು, ಅಷ್ಟನ್ನೂ ನಾವುಗಳೆಲ್ಲಾ ಹೊಸದಾಗಿ ಅಯ್ಕೆಯಾಗಿ ಬಂದ ವರ್ಷದಲ್ಲಿ ಅದನ್ನು ಉಪಯೋಗಿಸಿಕೊಳ್ಳಲೇ ಇಲ್ಲ. ಅದು ಲ್ಯಾಪ್ಸ್ ಆಯಿತು ಈ ವರ್ಷದಲ್ಲಿ ಇರುವುದು 5 ಕೋಟಿ 41 ಲಕ್ಷ ರೂಪಾಯಿಗಳು. ಅದರಲ್ಲಿ ಎರಡು ಕಂತು ಬಿಡುಗಡೆಯಾಗಿದೆ. ಮೂರನತೇ ಕಂತು

ಈಗ ಮಾರ್ಚ್‌ಗೆ ಎಕ್ಸ್‌ಪೈರ್ ಆಗುತ್ತದೆ. ಮೂರನೇ ತಂತಿನ ಔಷಧಿ ಎಷ್ಟೋ ಬಿಡುಗಡೆಯಾಗಿಲ್ಲ. ಕಳೆದ ಸದನದಲ್ಲಿ ನಾನು ಈ ಪ್ರಶ್ನೆ ಹಾಕಿದ್ದೆ. ತಾವು ಅರ್ಧ ಗಂಟೆ ಚರ್ಚೆಗೆಂದು ಅವಕಾಶ ಮಾಡಿಕೊಟ್ಟಿರಿ. ಅದು ರೀಚ್ ಆಗಲಿಲ್ಲ. ಎರಡು ಕಂತುಗಳಲ್ಲಿ ಕೊಟ್ಟಿರುವ ಔಷಧಿ ಎಷ್ಟು? ಮಾರ್ಚ್ 31ರಲ್ಲಿ ಇರುವುದನ್ನು ಅವೈಲ್ ಮಾಡದಿದ್ದರೆ ಅದು ಕೂಡ ಲ್ಯಾಪ್ಸ್ ಆಗುತ್ತದೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಹೊಸ ಟ್ರಾನ್ಸ್‌ಪೆರೆನ್ಸಿ ಆಕ್ಟ್ ಏನು ಬಂತು, ಆದರಿಂದ ಸ್ವಲ್ಪ ತಡವಾಯಿತು. ಮೂರನೇ ಕಂತನ್ನು ನಾವು ಕ್ಲಿಯರ್ ಮಾಡುತ್ತಿದ್ದೇವೆ. ಬಹುಶಃ ಇವತ್ತೋ ನಾಳೆಯೋ ಕ್ಲಿಯರ್ ಮಾಡುತ್ತೇವೆ. ಮೊದಲೇ ಕಂತ್‌ನಲ್ಲಿ ಸುಮಾರು 3 ಕೋಟಿ 46 ಲಕ್ಷ ರೂಪಾಯಿಗಳನ್ನು ಕ್ಲಿಯರ್ ಮಾಡಿದ್ದೇವೆ. ಅದನ್ನು ಸರಬರಾಜು ಕೂಡ ಮಾಡಿದ್ದೇವೆ. ಆ ರೀತಿ ಮಾಡಿರುವುದಕ್ಕೆ ಎಲ್ಲಾ ಜಿಲ್ಲೆಗಳಿಂದಲೂ ಮಾಹಿತಿಗಳನ್ನು ಪಡೆದುಕೊಂಡಿದ್ದೇವೆ. ಜಿಲ್ಲಾ ಪಂಚಾಯತ್ ಮತ್ತು ಕೆಎಂಎಫ್‌ದನ್ನು ಹೊರತುಪಡಿಸಿ ನಾನು ಹೇಳಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಜಿಲ್ಲಾ ಪಂಚಾಯಿತಿಗೆ ಕೊಟ್ಟೇ ಇಲ್ಲ.

ಶ್ರೀ ಎ.ಕೃಷ್ಣಪ್ಪ : ಕೊಟ್ಟಿದ್ದಾರೆ ಅಂದರೆ ನಿಮ್ಮ ಜಿಲ್ಲಾ ಪಂಚಾಯತಿಯಲ್ಲಿ ಏನು ಮಾಡಿದ್ದಾರೋ ಗೊತ್ತಿಲ್ಲ. ನಾನು ರೆವ್ಯೂ ಮಾಡಿದ 17 ಡಿಸ್ಟ್ರಿಕ್ಟ್‌ಗಳಲ್ಲೂ ಹಣವನ್ನು ಕೊಟ್ಟಿದ್ದಾರೆ. ಹಾಗೆ ಕೊಟ್ಟಿರುವುದು ಸಾಲದೇ ಇರಬಹುದು ಆ ಪ್ರಶ್ನೆಯನ್ನು ನಾವು ಒಪ್ಪಿಕೊಂಡಿದ್ದೇನೆ. ಜಿಲ್ಲಾ ಸಭೆಗಳಲ್ಲಿ ಅವರಿಗೆ ನಾವು ಹೊಸ ಆದೇಶವನ್ನು ಕೊಟ್ಟಿದ್ದೇವೆ, ಅದನ್ನು ಜಾಸ್ತಿಮಾಡಬೇಕೆಂದು ಹೇಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಯಾವಾಗ ಅಪಾಯಿಂಟ್‌ಮೆಂಟ್ ಮಾಡುತ್ತಾರೆಂದು ಆ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಕಟ್ ಆಫ್ ಡೇಟನ್ನು ಕೊಟ್ಟರೆ ಬಹಳ ಒಳ್ಳೆಯದು;

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪಶುವೈದ್ಯಶಾಲೆಗಳಲ್ಲಿ ಹೋಬಳಿ, ಹೆಡ್‌ಕ್ವಾರ್ಟರ್ಸ್‌ಗಳಲ್ಲೂ ಡಾಕ್ಟರ್‌ಗಳು ಇಲ್ಲ; ಯಾವ ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ಸ್‌ಗಳೂ ಇಲ್ಲ. ಒಬ್ಬೊಬ್ಬ ಇನ್ಸ್‌ಪೆಕ್ಟರ್‌ಗೆ ಮೂರು ಆಸ್ಪತ್ರೆಗಳ ಇನ್‌ಛಾರ್ಜ್ ಕೊಟ್ಟಿದ್ದಾರೆ. ಸುಮ್ಮನೆ ನಾಮಕಾವಸ್ತ ಪಟೇಲ ಇದ್ದಹಾಗೆ ನಾಮಕಾವಸ್ಥೆ ಆಸ್ಪತ್ರೆಗಳಾಗಿವೆ. ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಿ ಪ್ರತಿಯೊಂದು ಘಟಕಕ್ಕೂ ಕೂಡ ಸೂಕ್ತವಾದ ಅಧಿಕಾರಿಗಳನ್ನು ಮತ್ತು ಡಾಕ್ಟರ್‌ಗಳನ್ನು ನೇಮಿಸಬೇಕು. ಎರಡನೆಯದಾಗಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಾಲು, ಬಾಯಿ ಜ್ವರ ಖಾಯಿಲೆ ಬಂದು ಆಗಲೇ 15 ದಿವಸ, ಒಂದು ತಿಂಗಳಾದರೂ ಕೂಡ ಸುಮಾರು ಜಾನುವಾರುಗಳು ಸತ್ತುಹೋಗಿವೆ. ಡಾಕ್ಟರ್‌ಗಳನ್ನು ಕೇಳಿದರೆ ಔಷಧಿಗಳು ಇಲ್ಲ, ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ದಯಮಾಡಿ ಸಂಬಂಧಪಟ್ಟ ಆಸ್ಪತ್ರೆಗಳಿಗೆ ಔಷಧಿಗಳನ್ನು ರವಾನಿಸಿ ಕೂಡಲೇ ಖಾಯಿಲೆಯನ್ನು ನಿಯಂತ್ರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಹೊಸದಾಗಿ ಉತ್ತರ ಕೊಡತಕ್ಕದ್ದು ಏನೂ ಇಲ್ಲ. ನಾವು ನಿಮಗೆ ಭರವಸೆ ಕೊಟ್ಟಿದ್ದೇವೆ; ವೇಕೆನ್ಸಿಗಳು ಯಾವುದು ಯಾವುದು ಇದೆ, ಎಲ್ಲವನ್ನೂ ಭರ್ತಿ ಮಾಡುತ್ತಿದ್ದೇವೆಂದು ಹೇಳಿದೆ. ಮಾಡಿ ಆಯಿತು ಎಂದು ನಾನು ಹೇಳಲಿಲ್ಲ. ಇನ್ನು 15 ದಿವಸಗಳಲ್ಲಿ ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೇ, ನಮಗೆ ಕಟ್-ಆಫ್ ಡೇಟ್ ಹೇಳಿ ಏಪ್ರಿಲ್, ಮೆ-ನಲ್ಲಿ ಮಾಡುತ್ತೇವೆಂದು ಏನಾದರೂ ಒಂದು ಡೇಟ್‌ನ್ನು ಹೇಳಲಿ.

ಶ್ರೀ ಎ. ಕೃಷ್ಣಪ್ಪ : ನಾನು ಈಗಾಗಲೇ ಹೇಳಿದ್ದೇನೆ. ಇನ್ನು 15 ದಿವಸಗಳಲ್ಲಿ ನೀವು ಮಾಚ್ ಮಾಡಿ, ಅವರು ಕ್ರಮ ತೆಗೆದುಕೊಂಡು ಆಯಾ ಜಾಗಕ್ಕೆ ಡಾಕ್ಟರ್‌ಗಳು, ಪೆಟರ್‌ನರಿ ಇನ್ಸ್‌ಪೆಕ್ಟರ್‌ಗಳು ಬರದಿದ್ದರೆ ನನ್ನ ಗಮನಕ್ಕೆ ತನ್ನಿ. ಅದರ ಬಗ್ಗೆ ನಾನು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಕಟ್-ಆಫ್ ಪಾಯಿಂಟ್ ಎಂದರೆ ಅದೇ ಔಷಧಿಗಳ ಬಗ್ಗೆ ಮೂರನೇ ಕಂತು ಈಗಾಗಲೇ ಪ್ರೊಸೆಸ್ ಆಗುತ್ತಿದೆ. ಅದು ಹೋಗುತ್ತಿದೆ.

ಶ್ರೀ ಹೆಚ್.ಸಿ. ಒಸವರಾಜು : ಅಷ್ಟರೊಳಗೆ ದನಗಳೆಲ್ಲಾ ಸಾಯುತ್ತವೆ!

ಶ್ರೀರಂಗಪಟ್ಟಣ ಬೀದರ್ ರಾಷ್ಟ್ರೀಯ ಹೆದ್ದಾರಿ ಪ್ರಾರಂಭಿಸುವ ಬಗ್ಗೆ

133 (1133) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ಬೀದರ್ ರಾಷ್ಟ್ರೀಯ ಹೆದ್ದಾರಿ ಯಾವಾಗ ಪ್ರಾರಂಭಿಸಲಾಗುವುದು;

ಆ) ತುರುವೇಕೆರೆ ಮೂಲಕ ಹಾದುಹೋಗುವ ಮಾರ್ಗ ತೊಂದರೆಯಾಗಿದ್ದಲ್ಲಿ ಬೈಪಾಸ್ ರಸ್ತೆ ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಎಷ್ಟು ದಿನದಲ್ಲಿ ಬೈಪಾಸ್ ರಸ್ತೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ರಾಷ್ಟ್ರೀಯ ಹೆದ್ದಾರಿ ಘೋಷಣೆ ಇನ್ನೂ ಆಗಿರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ವಿಶ್ವಬ್ಯಾಂಕ್ ಯೋಜನೆಯಡಿ ಪ್ರಸ್ತಾವಿಸಲಾಗಿದೆ, ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪನೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ, ಇನ್ನೂ ಘೋಷಣೆ ಬಂದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಹೊರಸಲ ತುಮಕೂರು ಜಿಲ್ಲೆಗೆ ರಿವ್ಯೂ ಮೀಟಿಂಗ್‌ಗೆ ಬಂದಂತಹ ಸಂದರ್ಭದಲ್ಲಿ, ಸನ್ಮಾನ್ಯ ಮಂತ್ರಿಗಳು ಈಗಾಗಲೇ ಇದರ ಬಗ್ಗೆ ಗಮನಹರಿಸಿ ಮಾಡಿಕೊಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಜನಗಳಿಗೆ ಆ ರಸ್ತೆ ಆಗುತ್ತದೆ ಎನ್ನುತಕ್ಕ ಒಂದು ಮಾತಾವರಣದಲ್ಲಿ ಆ ಕಾಳಜಿ ಇದೆ. ಮತ್ತೆ ಎರಡನೇ ಪ್ರಶ್ನೆ ನಾನು ಕೇಳುತ್ತಿರತಕ್ಕದ್ದು, ಅದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ. ತುರುವೇಕೆರೆ ಮೂಲಕ ಹಾದು ಹೋಗತಕ್ಕಂತಹ ದಾರಿಯಲ್ಲಿ, 40 ಮೀಟರ್ ರಸ್ತೆಯನ್ನು ಮಾಡಿದಂತಹ ಸಂದರ್ಭದಲ್ಲಿ